# ಕಾಮ್ರೇಡ್ ಚಾರು ಮಜುಂದಾರ್ ಹಾಗೂ ಕಾಮ್ರೇಡ್ ಕನ್ನಯ್ಯ ಚಟರ್ಜಿಯವರನ್ನು ನೆನೆಯುತ್ತಾ ಲಾಲ್‌ಗಡದವರೆಗೆ–

ಭಾರತದ ಕ್ರಾಂತಿಕಾರಿ ಜನತೆ ಹುತಾತ್ಮರ ದಿನವನ್ನಾಗಿ ದೇಶಾದ್ಯಂತ ಆಚರಿಸುವ ದಿನ ಜುಲೈ 28. 1967 ರ ಇದೇ ದಿನದಂದು ಅಭೂತಪೂರ್ವ ನಕ್ಸಲ್‌ಬರಿ ಕ್ರಾಂತಿಕಾರಿ ದಂಗೆಗೆ ನಾಯಕತ್ವ ನೀಡಿದ ಕಾಮ್ರೇಡ್ ಚಾರುಮಜುಂದಾರ್ ಆಳುವ ವರ್ಗಗಳ ಜೈಲಿನಲ್ಲಿ ಹುತಾತ್ಮರಾದರು. ಕಾಮ್ರೇಡ್ ಕನ್ನಯ್ಯ ಚಟರ್ಜಿಯವರು ಅಸ್ಸಾಂ, ಬಿಹಾರ್‌ಗಳಲ್ಲಿ ಕ್ರಾಂತಿಕಾರಿ ಚಳುವಳಿಯ ಸ್ಥಾಪಕ ನಾಯಕರಾಗಿ ಹುತಾತ್ಮರಾದವರು. ಅಂದಿನಿಂದ ಇಲ್ಲಿಯವರೆಗೆ ಸುಮಾರು ಹನ್ನೊಂದು ಸಾವಿರಕ್ಕೂ ಹೆಚ್ಚು ಕ್ರಾಂತಿಕಾರಿಗಳು ಭಾರತದ ನವ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ತಮ್ಮ ಅಮೂಲ್ಯ ಪ್ರಾಣಗಳನ್ನು ಅರ್ಪಿಸಿದ್ದಾರೆ, ನುಡಿ ಹಾಗು ನಡೆಗಳಲ್ಲಿ ಒಂದೇ ರೀತಿಯಾಗಿ ಬಾಳ ಬದುಕಿ ಉನ್ನತ ಆದರ್ಶಗಳನ್ನು ಮೆರೆದಿದ್ದಾರೆ. ಒಬ್ಬ ಮನುಷ್ಯ, ಸಮಾಜಕ್ಕಾಗಿ ( ಅಂದರೆ ಬಹುಸಂಖ್ಯಾತರನ್ನು ಪ್ರತಿನಿಧಿಸುವ ಸಮಾಜ) ಮಾಡಬಹುದಾದ ಅತ್ಯುನ್ನತವಾದ ಕೊಡುಗೆಗಳನ್ನು ನೀಡಿ ಚರಿತ್ರೆಯಲ್ಲಿ ಅಮರರಾಗಿದ್ದಾರೆ.



ಸರ್ಕಾರಿ ಪಡೆಗಳ ನುಗ್ಗುವಿಕೆ.

ಪ್ರತಿಭಟನೆಯಲ್ಲಿ ಮಹಿಳೆಯರು

ಕರ್ನಾಟಕದಲ್ಲಿ ಕೋಗನೂರು ಗೋಣಪ್ಪರಿಂದ ಹಿಡಿದು ಮೆಣಸಿನಹಾಡ್ಯ ಬಳಿಯ ಮಾವಿನ ಕಾಡು ಎಂಬಲ್ಲಿ ಪ್ರಾಣ ಕೊಟ್ಟ ಕ್ರಾಂತಿಕಾರಿಗಳವರೆಗೆ ಸುಮಾರು 18ರಷ್ಟು ಕ್ರಾಂತಿಕಾರಿಗಳು ಅತ್ಯುನ್ನತ ಸಾಮಾಜಿಕ ಉದ್ಧೇಶಕ್ಕಾಗಿ ತಮ್ಮ ಪ್ರಾಣಗಳನ್ನೇ ನೀಡಿದ್ದಾರೆ. ಕ್ರಾಂತಿಕಾರಿ ಚೇತನಗಳಾದ ಸಾಕೇತ್ ರಾಜನ್, ಮನೋಹರ್, ಪಾರ್ವತಿ, ಭಾಸ್ಕರ್, ಉಮೇಶ್, ದಿನಕರ್, ಚೆನ್ನಪ್ಪ. ಅರುಣ್, ಹಾಜಿಮಾ, ಅಜಿತ್‌ಕುಸುಬಿ, ದೇವಯ್ಯ, ಪರಮೇಶ್ವರ್, ರವಿ, ಕಾವೇರಿ, ಸುಂದರೇಶ್ ಮೊದಲಾದವರು ಕರ್ನಾಟಕದ ಕ್ರಾಂತಿಕಾರಿ ವೀರ ಹುತಾತ್ಮರಾಗಿದ್ದಾರೆ.



ಪೋಲೀಸರು ನಡೆಸಿದ ಕಗ್ಗೊಲೆಗಳು

ಕೇಂದ್ರಮಟ್ಟದ ನಾಯಕರಿಂದ ಹಿಡಿದು ಸಮೂಹ ಸಂಘಟನೆಗಳ ಕಾರ್ಯಕರ್ತರುಗಳವರೆಗೆ ಈ ಹೋರಾಟದಲ್ಲಿ ತಮ್ಮ ಪ್ರಾಣಗಳನ್ನು ನೀಡಿದ್ದಾರೆ. ಆದಿವಾಸಿಗಳು, ದಲಿತರು, ಹಿಂದುಳಿದವರು, ಮಹಿಳೆಯರು, ಹಾಗೂ ಮುಂದುವರೆದ ಸಮುದಾಯದ ಹಿನ್ನೆಲೆಯಿಂದ ಬಂದ ಹಲವಾರು ಜನರು ಕ್ರಾಂತಿಗಾಗಿ ತ್ಯಾಗ ಬಲಿದಾನಗಳನ್ನು ಮಾಡಿದ್ದಾರೆ. ಈಗಲೂ ಮಾಡುತ್ತಿದ್ದಾರೆ. ಎಲ್ಲಾ ಕ್ರಾಂತಿಕಾರಿಗಳ ಈ ರೀತಿಯ ತ್ಯಾಗಬಲಿದಾನಗಳ ಫಲವಾಗಿ ಇಂದು ಕಾಣುತ್ತಿರುವ ಕ್ರಾಂತಿಕಾರಿ ಶಕ್ತಿಗಳ ಬೆಳವಣಿಗೆ ಸಾದ್ಯವಾಗಿದೆ ಎನ್ನಬಹುದು.

ಇಂದು ಭಾರತದ ಕ್ರಾಂತಿಕಾರಿ ಶಕ್ತಿಗಳು ಉನ್ನತ ಮಟ್ಟದ ಐಕ್ಯತೆಯನ್ನು ಸಾಧಿಸಿವೆ. ಕ್ರಾಂತಿಕಾರಿ ಹೋರಾಟ ದಾಪುಗಾಲು ಇಡುತ್ತಾ ಸಾಗುತ್ತಿದೆ. ಜಾರ್ಖಂಡ್, ಬಿಹಾರ್, ಚತ್ತೀಸ್‌ಗಡ್, ಒರಿಸ್ಸಾ, ಪಶ್ಚಿಮ ಬಂಗಾಳ, ಆಂದ್ರ, ಮಹಾರಾಷ್ಟ್ರಗಳಿಂದ ಹಿಡಿದು ಉತ್ತರಖಂಡ್, ಉತ್ತರ ಪ್ರದೇಶ್, ಹರ್ಯಾಣ, ಪಂಜಾಬ್, ಮದ್ಯಪ್ರದೇಶ್‌ಗಳಲ್ಲಿ ಕ್ರಾಂತಿಕಾರಿ ಪರ್ಯಾಯ ವ್ಯವಸ್ಥೆ ನೆಲೆಯೂರ ತೊಡಗಿವೆ. ಅದರಲ್ಲಿ ದಂಡಕಾರಣ್ಯ, ಚತ್ತೀಸ್‌ಗಡ, ಜಾರ್‌ಖಂಡ್, ಒರಿಸ್ಸಾ, ಪಶ್ಚಿಮಬಂಗಾಳ ಮಹಾರಾಷ್ಟ್ರಗಳಲ್ಲಿ ಪರ್ಯಾಯ ಕ್ರಾಂತಿಕಾರಿ ಆಡಳಿತಾಂಗಗಳು ಬಲಿಷ್ಟವಾಗುತ್ತಿವೆ. ದಕ್ಷಿಣದಲ್ಲಿ ತಮಿಳುನಾಡು, ಕೇರಳ, ಕರ್ನಾಟಕಗಳಲ್ಲಿ ಮಾವೋವಾದಿ ಕ್ರಾಂತಿಕಾರಿ ಶಕ್ತಿಗಳು ಬೆಳವಣಿಗೆಯನ್ನು ತೋರಿಸುತ್ತಿವೆ. ಹಿನ್ನಡೆ ಕಂಡಿದ್ದ ಆಂಧ್ರಪ್ರದೇಶದಲ್ಲಿ ಚೇತರಿಕೆ ಕಾಣತೊಡಗಿದೆ.



ಮಾವೋವಾದಿ ಕ್ರಾಂತಿಕಾರಿಗಳು ನಡೆಸಿದ ಧಾಳಿಯಲ್ಲಿ ಹತರಾದ ಪೋಲೀಸರು

ಭಾರತದ ಆಳುವ ವರ್ಗಗಳು ಇಂದು ಜನರ ಕ್ರಾಂತಿಕಾರಿ ಶಕ್ತಿಯನ್ನು ದೇಶದ ಅಂತರಿಕ ಭದ್ರತೆಗೆ ಪ್ರಧಾನ ಅಪಾಯ ಎಂದೇ ಗುರುತಿಸುತ್ತಿದ್ದಾರೆ. ತೀವ್ರವಾಗಿ ದಮನಿಸಿ ಹೊಸಕಿ ಹಾಕಲು ಪ್ರಯತ್ನ ನಡೆಸುತ್ತಿದ್ದಾರೆ. ಹೊರಗಿನ ಶತೃಗಳ ವಿರುದ್ಧ ಬಳಸಲು ಇರುವ ಸೇನೆಯನ್ನು ಕಮ್ಯೂನಿಷ್ಟ್ ಕ್ರಾಂತಿಕಾರಿಗಳ ವಿರುದ್ಧ ಬಳಸಲು ಆರಂಭಿಸಿದ್ದಾರೆ. ಜನರನ್ನೇ ಜನರ ವಿರುದ್ಧ ಎತ್ತಿಕಟ್ಟಿ ಕಗ್ಗೊಲೆಗಳಿಗೆ ಇಳಿಸುವ ಸೆಲ್ವಜುಡುಂನಂತಹ ಹೇಯ ರೀತಿಯ ಪ್ರತಿಕ್ರಾಂತಿಕಾರಿ ಗೂಂಡಾಪಡೆಗಳನ್ನು ದಮನರಂಗಕ್ಕೆ ಇಳಿಸಿ ಪ್ರಯೋಗ ನಡೆಸಿದ್ದಾರೆ. ಕರ್ನಾಟಕದಲ್ಲೂ ಪಶ್ಚಿಮ ಘಟ್ಟದ ಜನರನ್ನು ಹೇಗಾದರೂ ಮಾಡಿ ಹೊರಹಾಕಿ ಅಲ್ಲಿನ ಸಂಪತ್ತನ್ನು ದೋಚುವ ಹುನ್ನಾರ ನಡೆಯುತ್ತಿದೆ. ಅದಕ್ಕಾಗಿ ತೀವ್ರ ತರಹದ ದಮನ ಕಿರುಕುಳ ಹಿಂಸೆಗಳು ನಿರಂತರವಾಗಿವೆ.

ಬಿಕ್ಕಟ್ಟುಗಳಿಂದ ತತ್ತರಿಸುತ್ತಿರುವ ಸಾಮ್ರಾಜ್ಯಶಾಹಿಗಳು ತಮ್ಮ ಅಸ್ತಿತ್ವಕ್ಕಾಗಿ ಪರದಾಡುತ್ತಿದ್ದಾರೆ. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಹಿಂದೆಂದೂ ಇಲ್ಲದಂತೆ ಹೆಚ್ಚುತ್ತಲೇ ಹೋಗುತ್ತಿದೆ.

ಜನರಲ್ ಮೋಟಾರ್ಸ್‌ನಂತಹ ಜಗತ್ತಿಗೇ ದೊಡ್ಡದಾಗಿದ್ದ ಕಂಪನಿಗಳು ದಿವಾಳಿ ಎದ್ದು ಕೋಟ್ಯಾಂತರ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಮದ್ಯಮ ವರ್ಗ ತತ್ತರಿಸುತ್ತಿದೆ.



ರೋಷಗೊಂಡ ಜನರು ಶೋಷಕ ಸಿ.ಪಿ.ಎಂ ಕಛೇರಿಯ ಕಡತಗಳಿಗೆ ಬೆಂಕಿ ಹಚ್ಚಿರುವುದು.

ಜಗತ್ತಿನ ಕಾರ್ಮಿಕವರ್ಗ ಇನ್ನಿತರ ಜನವರ್ಗಗಳು ಸಮರಶೀಲ ಹೋರಾಟಗಳಿಗೆ ಇಳಿದಿದ್ದಾರೆ. ಫಿಲಿಫೈನ್ಸ್‌ನ ಕ್ರಾಂತಿಕಾರಿ ಚಳುವಳಿ ದಾಪುಗಾಲಿನಲ್ಲಿ ನಡೆಯತೊಡಗಿದೆ. ಅಲ್ಲಿನ ಗೆರಿಲ್ಲಾ ಸ್ಥಾವರಗಳ ಸಂಖ್ಯೆಗಳು ಏರತೊಡಗಿವೆ. ಪೆರುವಿನಲ್ಲಿ ಕ್ರಾಂತಿಕಾರಿ ಹೋರಾಟ ಹಿನ್ನೆಡೆಯಿಂದ ಹೊರಬಂದು ಮುನ್ನಡೆಯತೊಡಗಿದೆ. ಅಮೇರಿಕಾ, ಇಟಲಿ, ಟರ್ಕಿ, ಇರಾನ್, ಅಫ್ಘಾನಿಸ್ತಾನ, ಭೂತಾನ್, ಬಾಂಗ್ಲಾ ದೇಶ ಮೊದಲಾದ ದೇಶಗಳಲ್ಲಿ ಮಾವೋವಾದಿ ಕ್ರಾಂತಿಕಾರಿ ಶಕ್ತಿಗಳು ಬೆಳೆಯುತ್ತಿರುವ ಸುದ್ದಿಗಳು ಬರುತ್ತಿವೆ. ನೇಪಾಳದ ಕ್ರಾಂತಿಯಲ್ಲಿ ಆಗಿರುವ ತಪ್ಪುಗಳ ಕುರಿತು ತೀವ್ರ ಚರ್ಚೆ ಹಾಗೂ ಸೈದ್ಧಾಂತಿಕ ಹೋರಾಟ ನಡೆಯುತ್ತಿದೆ.

ನಂದಿಗ್ರಾಮ, ಸಿಂಗೂರು, ಲಾಲ್‌ಗಡ ಹೋರಾಟಗಳ ಉದಾಹರಣೆಗಳ ಮೂಲಕ ಇರುವ ಪರ್ಯಾಯ ಏನೆಂಬುದನ್ನು ಹಿಂದೆಂದಿಗಿಂತಲೂ ಸ್ಪಷ್ಟವಾಗಿ ದೇಶದ ಜನರಿಗೆ ತೋರಿಸಿಕೊಟ್ಟಿದೆ. ನಂದಿಗ್ರಾಮ ಪ್ರದೇಶದಲ್ಲಿ 8-9 ತಿಂಗಳುಗಳು, ಲಾಲ್‌ಗಡದಲ್ಲಿ 7-8 ತಿಂಗಳುಗಳ ಕಾಲ ಜನರು ತಮ್ಮನ್ನು ತಾವೇ ಆಳಿದರು. ತಮ್ಮದೇ ಆಡಳಿತದ ಅಂಗಗಳನ್ನು ರಚಿಸಿದ್ದಲ್ಲದೆ ಅದರ ರಕ್ಷಣೆಗಾಗಿ ತಮ್ಮದೇ ರಕ್ಷಣಾ ಯಂತ್ರಾಂಗವನ್ನು ರಚಿಸಿಕೊಂಡರು. ಶೋಷಕರನ್ನು, ಲೂಟಿಕೋರರನ್ನು ಆ ಒಟ್ಟೂ ಪ್ರದೇಶದಿಂದ ಓಡಿಸಿ ಬಿಟ್ಟರು. ಈ ಶೋಷಕರಲ್ಲಿ ಬಹುತೇಕರು ಪಾರ್ಲಿಮೆಂಟರಿ ಕ್ರಾಂತಿಕಾರಿಗಳಾದ!? ಸಿ.ಪಿ.ಎಂ ಪಕ್ಷದವರೇ ಆಗಿರುವುದು ಈಗ



ಲಾಲ್ ಗಡದ ಜನರು ಸರ್ಕಾರಿ ಹಾಗೂ ಸಿ.ಪಿ.ಎಂ ಗೂಂಡಾಪಡೆಗಳನ್ನು ತಡೆಯಲು ರಸ್ತೆ ಮೇಲೆ ಮರ ಉರುಳಿಸಿರುವುದು.

ಎಲ್ಲರಿಗೂ ಗೊತ್ತಿರುವ ವಿಚಾರ. ಮಾವೋವಾದಿ ಕ್ರಾಂತಿಕಾರಿಗಳು ದಂಡಕಾರಣ್ಯ, ಚತ್ತೀಸ್‌ಗಡ, ಜಾರ್ಖಂಡ್ ಮೊದಲಾದೆಡೆಗಳಲ್ಲಿ ಅಳವಡಿಸುತ್ತಿರುವ ಜನರ ಪರ್ಯಾಯ ಆಡಳಿತ ವ್ಯವಸ್ಥೆಯನ್ನು, ಸಿ.ಪಿ.ಎಂ ನೇತೃತ್ವದ ಸರ್ಕಾರ ಬಲಾತ್ಕಾರದಿಂದ ಒಕ್ಕಲೆಬ್ಬಿಸಿ ನಾಶಪಡಿಸಲು ಹೊರಟಿರುವ ನಂದಿಗ್ರಾಮ ಹಾಗು ಲಾಲ್‌ಗಡ ಜನರಿಗೆ ಇರುವ ಏಕೈಕ ಪರಿಹಾರವಾಗಿ ತೋರಿಸಿಕೊಟ್ಟರು. ಜನರ

ಹೋರಾಟಕ್ಕೆ ನೇತೃತ್ವವನ್ನೂ ನೀಡಿದರು. ಜನರು ಈ ಪ್ರಯೋಗವನ್ನು ಯಶಸ್ವಿಯಾಗಿ ಅಳವಡಿಸಿ ಅದರ ಸಾದ್ಯತೆಯನ್ನು ಪ್ರತ್ಯಕ್ಷವಾಗಿ ನೋಡಿದರು. ತಮ್ಮನ್ನು ತಾವೇ ಆಳಿಕೊಳ್ಳುವುದು, ಅಭಿವೃದ್ಧಿ ಹೊಂದುವುದು, ರಕ್ಷಿಸಿಕೊಳ್ಳುವುದು, ಇಡೀ ಜನಸಮೂಹದ ಪಾತ್ರವನ್ನು ಖಾತ್ರಿಪಡಿಸುವುದು, ಆಡಳಿತದಲ್ಲಿ ಜನರು ನೇರ ನಿಗಾ ವಹಿಸುವುದು, ತಪ್ಪು ಮಾಡಿದವರನ್ನು ಹೊಣೆಗಾರಿಕೆಯಿಂದ ವಾಪಾಸು ಕರೆಸಿಕೊಳ್ಳುವುದು. ಲಂಚ ಹಾಗೂ ಭ್ರಷ್ಟಾಚಾರಮುಕ್ತ ವಾತಾವರಣ ನಿರ್ಮಾಣ ಮಾಡುವುದು ಹೀಗೆ ನಿಜವಾದ ಜನರದೇ ಆದ ವ್ಯವಸ್ಥೆಯನ್ನು ಅಂದರೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ಮುನ್ನಡೆಸುವುದನ್ನು ಸಾದ್ಯಮಾಡಿ ಪ್ರತ್ಯಕ್ಷವಾಗಿ ಅದರ ಅನುಭವವನ್ನೂ ಪಡೆದರು. ಇವೆಲ್ಲದರ ಮೂಲಕ ಇಡೀ ದೇಶದ ಜನರಿಗೆ ನಿಜವಾದ ಜನಾಡಳಿತದ ಸಾದ್ಯತೆಗಳನ್ನು ತೋರಿಸಿಕೊಟ್ಟಿದ್ದಾರೆ.







ಗುರಿ ಇಟ್ಟ ಕ್ರಾಂತಿಕಾರಿ ಮಹಿಳಾ ಗೆರಿಲ್ಲಾಗಳು ಮಾವೋವಾದಿ ಗೆರಿಲ್ಲಾಗಳ ನೆಲಬಾಂಬ್ ದಾಳಿಯಿಂದ ನಜ್ಜು ಗುಜ್ಜಾದ ಪೋಲಿಸ್ ವಾಹನ

ಬಹುಸಂಖ್ಯಾತ ಜನರಿಗೆ ಇಂದು ಈ ಕ್ರಾಂತಿಕಾರಿ ಮಾದರಿಗಳೇ ಕೊಳೆತ ವ್ರಣಗಳಿಂದ ನಾರುತ್ತಿರುವ ಭಾರತದ ಸಾಮಾಜಿಕ ವ್ಯವಸ್ಥೆಗೆ ಪರಿಹಾರವಾಗಿ ಅನಿಸತೊಡಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಜನರ ಭಾಗವಹಿಸುವಿಕೆ ಹಿಂದಿನ ಎಲ್ಲಾ ಸಂದರ್ಭಗಳಿಗಿಂತಲೂ ಕಡಿಮೆ ಇತ್ತು. ಇದು ಜನರಲ್ಲಿ ಈ ಭ್ರಷ್ಟ ಹಾಗೂ ಲೂಟಿಕೋರ ವ್ಯವಸ್ಥೆಯ ಮೇಲಿರುವ ಸಿಟ್ಟು ಎಂತಹುದು ಎಂಬುದನ್ನು ಅರ್ಥ ಮಾಡಿಸುತ್ತದೆ. ಮುನ್ನೆಡೆಯುತ್ತಿರುವ ಮಾವೋವಾದಿ ಕ್ರಾಂತಿ ಹಾಗು ನಂದಿಗ್ರಾಮ, ಸಿಂಗೂರು, ಲಾಲ್‌ಗಡಗಳ ಜನರ ವೀರೋಚಿತ ರಾಜಿರಹಿತ ಹೋರಾಟಗಳು ತುಳಿಯ ಬೇಕಾದ ಹಾದಿ ಮತ್ತು ಮಾಡಬೇಕಾದ ತ್ಯಾಗಗಳನ್ನು ಸ್ಪಷ್ಟ ಪಡಿಸುತ್ತವೆ.

ಜುಲೈ 28 ರ ಈ ಸಂದರ್ಭದಲ್ಲಿ ಅಮರ ವೀರರ ನೆನಪುಗಳನ್ನು ಅರ್ಥಪೂರ್ಣವಾಗಿ ಮಾಡಿಕೊಂಡು ಅವರೆಲ್ಲರ ಆಶಯಗಳ ಈಡೇರಿಕೆಗಾಗಿ ಶ್ರಮಿಸುವುದು ಎಲ್ಲರ ಕರ್ತವ್ಯ ಅಲ್ಲವೆ.

**26 ಜುಲೈ 09** –ರಂಗರಾಜ್ ಮತ್ತಿಕಟ್ಟಿ